ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 98-108
©*IIMRD*, Mysuru

IIMRD
JOURNALS

www.iimrd.com

# ಬಾಗಲಕೋಟೆ ಜಿಲ್ಲೆಯ ನೇಕಾರರ ಉದ್ಯಮ ವ್ಯವಸ್ಥೆ ಮತ್ತು ಸಮಸ್ಯೆಗಳು

ಮಲ್ಲಿಕಾರ್ಜುನ ಮೊರಬದ[1] ಮತ್ತು ಡಾ. ಕುಮಾರ[2]

**ಪೀಠಿಕೆ**

ಭಾರತ ದೇಶದಲ್ಲಿ ನೇಕಾರಿಕೆಯನ್ನು ಪಾರಂಪರಿಕವಾಗಿ ಕಸುಬು ಮಾಡಿಕೊಂಡ ಸಮುದಾಯಗಳನ್ನು ಕಾಣುತ್ತೇವೆ. ಅವುಗಳಲ್ಲಿ ದೇವಾಂಗ, ಪದ್ಮಶಾಲೆ, ಪಟ್ಟಶಾಲೆ, ಕುರುಹಿನಶೆಟ್ಟಿ, ಸ್ವಕುಳಸಾಲಿ, ಕೈಕೊಳ್ಳವರ್, ತೋಗಟವೀರರು ಮತ್ತು ಹಟಗಾರರು ಹಾಗೂ ಇತರ ರಾಜ್ಯಗಳಲ್ಲಿ ಹಲವಾರು ಸಮುದಾಯಗಳನ್ನು ನೋಡಿದ್ದೇವೆ. ಕೈಮಗ್ಗ ಮತ್ತು ಕೈಮಗ್ಗದಿಂದ ವಿದ್ಯುತ್ ಮಗ್ಗದವರೆಗೂ ಸ್ಥಾನಪಲ್ಲಟ ಹೊಂದಿದ್ದಾರೆ. ಆದರೂ ಪಾರಂಪರಿಕ ವೃತ್ತಿಯನ್ನು ಅನುಸರಿಸಿಕೊಂಡು ಬಂದಿರುವ ನೇಕಾರ ಸಮುದಾಯಗಳು ನಿರಂತರ ನೇಕಾರಿಕೆ ವೃತ್ತಿಯಲ್ಲಿದ್ದಾರೆ. ನೇಕಾರರು ಪಾರಂಪರಿಕ ಬಟ್ಟೆಗಳ ಉತ್ಪನ್ನಗಳಾದ ಮೈಸೂರು ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಗದಗ–ಬೆಟಗೇರಿ ನೂಲಿನ ಸೀರೆ, ಬೆಳಗಾವಿಯ ರೇಷ್ಮೆ ಮತ್ತು ಇತರೆ ಚೈನಾಶಿಲ್ಕ, ಪಾಲಿಸ್ಟರ್ ಸೀರೆ, ಇಳಕಲ್ಲ ಸೀರೆ ಹಾಗೂ ಗುಳೇದಗುಡ್ಡ ಖಣಗಳು ಮತ್ತು ಸೀರೆಗಳು ಹಾಗೂ ನೂಲಿನ ಬಟ್ಟೆಗಳನ್ನು ಉತ್ಪಾದಿಸುತ್ತಾರೆ. ಪ್ರಸ್ತುತ ಅಧ್ಯಯನಕ್ಕೆ ಬಾಗಲಕೋಟೆ ಜಿಲ್ಲೆಯಲ್ಲಿ ಇಳಕಲ್ಲ ಸೀರೆ, ಗುಳೇದಗುಡ್ಡ ಖಣ ಮತ್ತು ಸೀರೆಗಳನ್ನು ಉತ್ಪಾದಿಸುವ 100 ನೇಕಾರ ಕುಟುಂಬಗಳನ್ನು ಸಂದರ್ಶಿಸಿ, ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಬಾಗಲಕೋಟೆ ಜಿಲ್ಲೆಯ ನೇಕಾರರು ಮತ್ತು ಉತ್ಪನ್ನಗಳು**

ಬಾಗಲಕೋಟೆ ಜಿಲ್ಲೆಯ ಇಳಕಲ್ಲ, ಗುಳೇದಗುಡ್ಡ, ರಬಕವಿ–ಬನಹಟ್ಟಿ, ಮಹಾಲಿಂಗಪೂರ, ತೇರದಾಳ ಕಮತಗಿ, ಅಮೀನಗಡ, ಸೂಳಿಭಾವಿ, ಕೊಂಕೋಣಕೊಪ್ಪ ಮುಂತಾದ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪಾರಂಪರಿಕ ನೇಕಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಸಮುದಾಯದವರು ಕಂಡುಬರುತ್ತಾರೆ.

---

*[1] ಸಂಶೋಧನ ವಿದ್ಯಾರ್ಥಿ (ಎಂ.ಎಸ್.ಡಬ್ಲ್ಯೂ), ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.*
*[2] ಸಹ ಮಾರ್ಗದರ್ಶಕರು ಮತ್ತು ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ*

ಇವರು ನೂಲು, ನಾರು, ರೇಷ್ಮೆ, ಚೈನಾ ರೇಷ್ಮೆ, ಉಣ್ಣೆ ಮುಂತಾದವುಗಳನ್ನು ಬಳಸಿಕೊಂಡು ಸೀರೆ, ರಾಷ್ಟ್ರಧ್ವಜ ಮತ್ತು ನೂಲಿನ ಬಟ್ಟೆಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸುತ್ತಾರೆ. ಇಳಕಲ್ಲ ಸೀರೆಗಳು ಮತ್ತು ಗುಳೇದಗುಡ್ಡ ಖಣಗಳು ಇಲ್ಲಿನ ಪಾರಂಪರಿಕ ಉತ್ಪನ್ನಗಳು. ಈ ಪಾರಂಪರಿಕ ಉತ್ಪನ್ನಗಳಲ್ಲಿ ವಿವಿಧ ವಿನ್ಯಾಸಗಳಿದ್ದು, ಅವುಗಳಲ್ಲಿ ತೋಪುತೆನೆ ಸೀರೆ, ಚಂದ್ರಕಾಳಿ ಸೀರೆ, ದೊಡ್ಡ ಮತ್ತು ಸಣ್ಣ ಅಂಚಿನ ಸೀರೆ, ಗೋಪುರ, ನವಿಲು, ರುದ್ರಾಕ್ಷಿ ಇನ್ನೂ ಮುಂತಾದ ಪ್ರಾಕೃತಿಕ ಹೆಸರಿನ ವಿನ್ಯಾಸದ ಸೀರೆಗಳನ್ನು ಉತ್ಪಾದಿಸುತ್ತಾರೆ. ಕಾಲಕ್ಕೆ ತಕ್ಕಂತೆ ಸೀರೆಗಳ ನೂಲುಗಳಲ್ಲಿ ಬದಲಾವಣೆ ಮತ್ತು ವಿನ್ಯಾಸಗಳನ್ನು ಕಾಣುತ್ತೇವೆ.

ಗುಳೇದಗುಡ್ಡದ ಪಾರಂಪರಿಕ ಉತ್ಪನ್ನಗಳಾದ ಖಣ ಪ್ರಸಿದ್ಧಿ ಪಡೆದಿವೆ. ಖಣಗಳ ವಿನ್ಯಾಸಗಳಲ್ಲಿ ಹೆಚ್ಚಾಗಿ ಸೂಜಿಮಲ್ಲಿಗೆ, ಕರಮಂಟಿಕೆ, ಸೇವಂತಿ ಕರಮಂಟಿಕೆ, ತೇರಿನ ಕರಮಂಟಿಕೆ, ಚೌಲಿ, ತೇರುಕ್ಯಾದಿಗೆ, ರುಮಾಲು, ಕ್ಯಾದಿಗೆಬಳ್ಳಿ, ಸಿದ್ದೇಶ್ವರ ಮುಕುಟ, ತೇರುಬಳ್ಳಿ, ಕಳವಾರ ಕರಮಂಟಿಕೆ, ಕ್ಯಾದಗಿ ಕಡ್ಡಿ ಮುಂತಾದ ಖಣಗಳನ್ನು ಉತ್ಪಾದಿಸುತ್ತಾರೆ. ಇನ್ನೂ ಪ್ರಕೃತಿದತ್ತವಾದ ಆನೆ, ನವಿಲು, ಚಂದ್ರಸರ, ತುಳಿಸಿ, ರುದ್ರಾಕ್ಷಿಬಳ್ಳಿ, ಯಾಲಕ್ಕಿಬಳ್ಳಿ ಹಾಗೂ ಈಶ್ವರ, ಬಸವಣ್ಣ, ದೊಡ್ಡಹರಡಿ, ದೊಡ್ಡ ತೇರು ಮುಂತಾದ ಖಣಗಳ ವಿನ್ಯಾಸಗಳನ್ನು ನೋಡುತ್ತೇವೆ. ಈ ಜಿಲ್ಲೆಯಲ್ಲಿ ಕಂಬಳಿ ಉತ್ಪಾದನೆಯ ಕುರುಬ ಸಮುದಾಯದ ನೇಕಾರರು ಸಿಗುತ್ತಾರೆ, ಹಾಸಿಗೆಯ ಉತ್ಪನ್ನಗಳಾದ ಜಮಖಾನೆ ಹಾಸಿಗೆ–ಹೊದಿಕೆ ಉತ್ಪಾದಿಸುವ ನೇಕಾರರು ಇದ್ದಾರೆ. ರೇಷ್ಮೆ ಪಟಗಾ ಉತ್ಪಾದಕರು, ಖಾದಿ ನೂಲಿನ ಬಟ್ಟೆಯ ನೇಕಾರರು ಕಾಟನ್‌ಶರ್ಟ ಬಟ್ಟೆ, ಕೈವಸ್ತ್ರ, ಟಾವೆಲ್, ಪರದೆಯ ಬಟ್ಟೆ, ಚೂಡಿದಾರ ಬಟ್ಟೆ ಹಾಗೂ ಮುಂತಾದ ಹೊಸ ಉಡುಪಿನ ಉತ್ಪನ್ನಗಳನ್ನು ಇಲ್ಲಿ ಉತ್ಪಾದಿಸುತ್ತಾರೆ.

**ನೇಕಾರರ ಉದ್ಯಮ ವ್ಯವಸ್ಥೆ ಮತ್ತು ಸಮಸ್ಯೆಗಳು**

ನೇಕಾರಿಕೆ ಕರ್ನಾಟಕದಲ್ಲಿ ಪ್ರಮುಖ ಉದ್ಯಮವಾಗಿದೆ. ಇದು ಗ್ರಾಮೀಣ, ಸಣ್ಣ ಮತ್ತು ಬೃಹತ್ ನಗರಗಳಲ್ಲಿ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ಬಟ್ಟೆಯನ್ನು ಎಲ್ಲರೂ ಬಳಸುವುದರಿಂದ ಇದರ ಬೇಡಿಕೆ ಸದಾಕಾಲ ಇರುತ್ತದೆ. ನೇಕಾರಿಕೆ ನಿರಂತರತೆ ಕಾಪಾಡಿಕೊಂಡು ಬಂದಿರುವುದು ಮತ್ತು ಹೊಸ ಆವಿಷ್ಕಾರಗಳಿಂದ ಗುಡಿ ಮತ್ತು ಬೃಹತ್ ಕೈಗಾರಿಕೆಗಳಿಂದ ಇಂದು ಉದ್ಯಮವಾಗಿದೆ. ನೇಕಾರಿಕೆಯ ಉದ್ಯಮವನ್ನು ಖಾಸಗಿ ವಲಯ, ಸಹಕಾರಿ ವಲಯ, ಸರಕಾರಿ ಹಾಗೂ ಅರೆಸರಕಾರಿ ವಲಯಗಳಾಗಿ ವಿಂಗಡಿಸಲಾಗಿದೆ. ಈ ಭಾಗದಲ್ಲಿ ಹೆಚ್ಚಾಗಿ ಖಾಸಗಿ ವಲಯದಲ್ಲಿ ವ್ಯಾಪಾರ ಉತ್ಪಾದನೆಗಳು ನಡೆಯುತ್ತವೆ.

**ಖಾಸಗಿ ವಲಯದ ನೇಕಾರರು**

ಖಾಸಗಿ ವಲಯದಲ್ಲಿ ಕಾರ್ಯನಿರ್ವಹಿಸುವ ನೇಕಾರರನ್ನು ಪ್ರಮುಖವಾಗಿ ಸ್ವತಂತ್ರ ನೇಕಾರರು ಮತ್ತು ಮಾಲಿಕತ್ವದ/ಮುಂಗಡ ನೇಕಾರರು ಎಂಬುದಾಗಿ ವಿಂಗಡಿಸಲಾಗುತ್ತದೆ. ಸ್ವತಂತ್ರ

ನೇಕಾರ ತನ್ನದೆ ಆದ ಕೈಮಗ್ಗವನ್ನು ಅಥವಾ ವಿದ್ಯುತ್ತಚಾಲಿತ ಮಗ್ಗ ಹೊಂದಿದ್ದು. ಬಟ್ಟೆ ನೇಯಲು ಬೇಕಾದ ಕಚ್ಚಾ ವಸ್ತುವನ್ನು ಸ್ವಂತ ಹಣದಿಂದ ಖರೀದಿಸುತ್ತಾರೆ. ಈ ಕಚ್ಚಾ ವಸ್ತುವನ್ನು ಖರೀದಿಸಲು ಮಾಸ್ಟರ್ ವ್ಹಿವರ್ ಅಥವಾ ಸರಕಾರಿ ಇಲಾಖೆಯಿಂದ ಖರೀದಿ ಮಾಡುತ್ತಾರೆ. ಕುಟುಂಬದ ಸದಸ್ಯರ ಸಹಾಯದಿಂದ ಬಟ್ಟೆಯನ್ನು ತಯಾರಿಸಲು, ಬಣ್ಣ ಹಾಕಿಸುವ ಇಲ್ಲವೇ ಬಣ್ಣ ಹಾಕಿರುವ ನೂಲು ತೆಗೆದುಕೊಳ್ಳುವದು ಹೆಚ್ಚು ಕಂಡುಬಂದಿದೆ. ನೂಲು ಹಿಂಜುವುದು, ಹಣಗೆ ಕೆಚ್ಚುವುದು, ಟಾನ ಹಾಕುವುದು, ಕಂಡಿಕೆ ಸುತ್ತುವ ಕೆಲಸ ಮತ್ತು ಶುದ್ಧ ಬಟ್ಟೆಯನ್ನು ಅಥವಾ ಸೀರೆಯನ್ನು ನೇಯುವ ಕೆಲಸ ಮತ್ತು ಮಾರಾಟ ಮಾಡುತ್ತಾರೆ. ತಯಾರಿಸಿದ ಉತ್ಪನ್ನಕ್ಕೆ ಸ್ವತಂತ್ರವಾಗಿರುತ್ತಾನೆ. ನೇಕಾರರಿಗೆ ಮಾರುವಂತ ಹಕ್ಕು ಇರುತ್ತದೆ. ಇಲ್ಲಿ ನೇಕಾರನು ಸ್ವತಂತ್ರವಾಗಿದ್ದರೂ ಅವನಿಗೆ ಬೇಕಾದ ಬೆಲೆಯಲ್ಲಿ ಮಾರಲು ಅಸಹಾಯಕ. ಇಲ್ಲಿ ಮಾರುಕಟ್ಟೆಯ ಆಧಾರದಲ್ಲಿ ಅಥವಾ ಮಾಸ್ಟರ್ ವ್ಹಿವರ ಹತ್ತಿರ ತನ್ನ ಶುದ್ಧ ಬಟ್ಟೆಯನ್ನು ಅವರ ಬೆಲೆಯಲ್ಲಿ ಮಾರಾಟ ಮಾಡಬೇಕಾಗುತ್ತದೆ. ಒಳ್ಳೆಯ ಬೆಲೆ ಇದ್ದರೆ ಜೀವನದಲ್ಲಿ ನೇಕಾರರು ಉತ್ತಮ ಜೀವನ ಮತ್ತು ಉಳಿತಾಯ ಮಾಡುತ್ತಾನೆ.

ಮಾಲಿಕತ್ವದ/ಮುಂಗಡ ನೇಕಾರ ಪದ್ಧತಿಯಲ್ಲಿ ನೇಕಾರರು ನೇಯುವ ಕಚ್ಚಾವಸ್ತುವನ್ನು ಮಾಲೀಕರ ಅಥವಾ ಮಾಸ್ಟರ್ ವ್ಹಿವರ್ ಹತ್ತಿರ ತೆಗೆದುಕೊಂಡು ಬರುತ್ತಾರೆ. ಅದನ್ನು ನೇಯ್ದು ಬಟ್ಟೆ ಮಾಡಿಕೊಡಲು ಮುಂಗಡವಾಗಿ ಕಚ್ಚಾವಸ್ತು ಪಡೆಯುತ್ತಾರೆ. ಇಲ್ಲಿ ಹಣವಿದ್ದ ನೇಕಾರನು ಹಣಕೊಟ್ಟು ಕಚ್ಚಾ ಮಾಲು ಖರೀದಿಸಬಹುದು, ಹಣ ಇಲ್ಲದ ಬಡವನು ಮುಂಗಡವಾಗಿ ನೂಲನ್ನು ತೆಗೆದುಕೊಂಡು ಬರುತ್ತಾನೆ. ಖರೀದಿ ಮಾಡಿದ ಕಚ್ಚಾವಸ್ತುವನ್ನು ಕುಟುಂಬದ ಎಲ್ಲರು ಸೇರಿಕೊಂಡು ನೇಯ್ಗೆ ಪ್ರಕ್ರಿಯೆಗಳ ಮೂಲಕ ಶುದ್ಧ ಸೀರೆ ಹಾಗೂ ಖಣವನ್ನು ತಯಾರಿಸುತ್ತಾರೆ. ಈ ರೀತಿಯ ಮಾರಾಟ ಮತ್ತು ಕೊಳ್ಳುವಿಕೆಯಲ್ಲಿ ಕಚ್ಚಾವಸ್ತುವಿನ ಬೆಲೆ ಹಾಗೂ ಶುದ್ಧ ಉತ್ಪನ್ನಗಳ ಬೆಲೆಯಲ್ಲಿ ವ್ಯತ್ಯಾಸಗಳು ಕಂಡುಬಂದರೆ ನೇಕಾರರು ಸಾಲದ ಸ್ಥಿತಿಯಲ್ಲಿ ಸಿಲುಕುತ್ತಾರೆ. ಶುದ್ಧ ವಸ್ತುವನ್ನು ಕಡಿಮೆ ಬೆಲೆಯಲ್ಲಿ ಮಾರಿಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. (ವಕ್ತೃ1)

ಇದಲ್ಲದೆ ಖಾಸಗಿ ಒಡೆತನದ ನೇಕಾರಿಕೆಯಲ್ಲಿ ಮುಂಗಡ ಪದ್ಧತಿ ನೇಕಾರಿಕೆ, ಸಟ್ಟಾ ನೇಕಾರಿಕೆ ಪದ್ಧತಿ ಹಾಗೂ ರೊಕಡಾ ಪದ್ಧತಿಯನ್ನು ಹೊಂದಿರುವುದು.

**ಮುಂಗಾಡು ಪದ್ಧತಿ**

ಈ ಪದ್ಧತಿಯಲ್ಲಿ ನೇಕಾರರಿಗೆ 15 ರಿಂದ 30 ಸೀರೆಗಳಿಗೆ ಬೇಕಾಗುವಷ್ಟು ಕಚ್ಚಾ ನೂಲಿನ ವಸ್ತುವನ್ನು ಒಟ್ಟಿಗೆ ಪೂರೈಸಲಾಗುತ್ತದೆ. ನೇಕಾರನ ಕುಟುಂಬದ ಸದಸ್ಯರೆಲ್ಲರ ಸಹಾಯದಿಂದ ತೋಡುವುದು, ಕೆಚ್ಚುವುದು, ಹಾಸುವುದು ಮುಂತಾದ ಪೂರ್ವತಯಾರಿ ಕೆಲಸಗಳು ಮಾಡುತ್ತಾರೆ. ಶುದ್ಧ ಸೀರೆ ಅಥವಾ ಖಣವನ್ನು ತಯಾರಿಸಿ ಮಾಲೀಕರಿಗೆ ತಂದು ಕೊಡುತ್ತಾರೆ. ಇದರ

ಪ್ರತಿಫಲವಾಗಿ ನೇಕಾರರು ನೇಯ್ದು ಕೂಲಿಯನ್ನು ಪಡೆಯುತ್ತಾನೆ. ಕಚ್ಚಾವಸ್ತುವಿನ ಬೆಲೆಗಳ ಏರಿಳಿತಗಳು ನೇಕಾರನನ್ನು ಭಾದಿಸುವುದಿಲ್ಲ. ಅವನು ದುಡಿದಂತೆ ಮಜೂರಿ ಸಿಗುತ್ತದೆ. ಆದರೆ ಅವನ ಕೂಲಿಯು ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಅವನ ಆರ್ಥಿಕ ಬೆಳವಣಿಗೆ ಬಹಳ ಆಮೆಗತಿಯಲ್ಲಿರುತ್ತದೆ. ನೇಕಾರರಿಗೆ ವರ್ಷಕ್ಕೆ ಒಂದು ಸಲ ಮಾತ್ರ ಕೂಲಿಯನ್ನು ಏರಿಸುವ ಪದ್ಧತಿ ಜಾರಿಯಲ್ಲಿದೆ. ಆದ್ದರಿಂದ ಈ ಸಂದರ್ಭದಲ್ಲಿ ಸಾಮಾನ್ಯ ದಿನನಿತ್ಯದ ವಸ್ತುಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಅವರ ಕೂಲಿಯು ಅವರ ಮನೆ ನಿರ್ವಹಣೆಗೆ, ಅವರ ಸಾಮಾನ್ಯ ಜೀವನವು ಕಷ್ಟದಲ್ಲಿರುತ್ತದೆ.

**ಸಟ್ಟಾ ಪದ್ಧತಿ**

ಈ ಪದ್ಧತಿಯಲ್ಲಿ ನೇಕಾರರು ಸೀರೆ ವ್ಯಾಪಾರಸ್ಥರಿಂದ ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳುತ್ತಾರೆ. ಆ ಹಣದಿಂದ ಸೀರೆಗೆ ಹಾಗೂ ಖಣಗಳಿಗೆ ಬೇಕಾದ ಕಚ್ಚಾ ನೂಲು ಖರೀದಿಸುತ್ತಾರೆ. ಸೀರೆ ಅಥವಾ ಖಣವನ್ನು ಕುಟುಂಬದ ಸಹಾಯದಿಂದ ನೇಯ್ದು ಮರಳಿ ಅದೇ ಧಣಿಗಳಿಗೆ/ಮಾಲೀಕರಿಗೆ ಅಥವಾ ವ್ಯಾಪಾರಿಗೆ ಮಾರಾಟ ಮಾಡುತ್ತಾರೆ. ವ್ಯಾಪಾರಸ್ಥ ಮಾರುಕಟ್ಟೆ ದರದ ಅನುಸಾರ ಶುದ್ಧ ವಸ್ತುವನ್ನು ಖರೀದಿಸುತ್ತಾನೆ. ಇದರಲ್ಲಿ ನೇಕಾರನಿಗೆ ಕಚ್ಚಾ ಮಾಲಿನ ಹಣ ಮತ್ತು ಶುದ್ಧ ಮಾಲನ್ನು ತಯಾರಿಸುವ ಹಂತದ ವೆಚ್ಚವನ್ನು ಖಡಿತಗೊಳಿಸಿ ಅವನ ಉಳಿದ ಹಣವು ಅವನ ಆದಾಯ ಎಂದು ತಿಳಿಯುತ್ತೆವೆ. ಅದೆ ಲಾಭ ಅಥವಾ ಮಜೂರಿ, ಕೆಲವೊಮ್ಮೆ ಕಚ್ಚಾ ಮಾಲಿನ ಬೆಲೆ ಹೆಚ್ಚಾಗಿ ಶುದ್ಧ ವಸ್ತುವಿನ ಬೆಲೆ ಕಡಿಮೆ ಅಥವಾ ಸ್ಥಿರವಾಗಿ ಉಳಿದಾಗ ನೇಕಾರ ನಷ್ಟಕ್ಕೆ ಒಳಗಾಗುವುದುಂಟು. ಇದರಿಂದ ನೇಕಾರರು ಕುಟುಂಬ ನಿರ್ವಹಣೆ ಮತ್ತು ನೇಕಾರಿಕೆ ಬದುಕು ಕಟ್ಟಿಕೊಳ್ಳಲು ಸಾಲ ಮತ್ತು ಮಾಲೀಕರ ಹತ್ತಿರ ಕೈಗಡ ಹಣವನ್ನು ಪಡೆದು ಸಾಲಗಾರನಾಗುತ್ತಾನೆ. ಅವನು ಸಾಲದ ಚಿಂತೆಯಲ್ಲಿ ನೇಕಾರಿಕೆ ಬಿಟ್ಟಿರುವ ಮನಸ್ಥಿತಿಗಳು ಮತ್ತು ಆತ್ಮಹತ್ಯೆಗೆ ಶರಣಾದ ಪ್ರಕರಣಗಳು ನೇಕಾರರಲ್ಲಿ ಕಂಡುಬರುತ್ತವೆ.

**ರೊಕಡಾ ಪದ್ಧತಿ**

ಈ ಪದ್ಧತಿಯಲ್ಲಿ ನೇಕಾರನೂ ತನ್ನ ಸ್ವಂತ ಬಂಡವಾಳದಿಂದ ಕಚ್ಚಾ ನೂಲಿನ ವಸ್ತು ಖರೀದಿಮಾಡುತ್ತಾನೆ. ಸೀರೆ, ಖಣ, ಬಟ್ಟೆ ತಯಾರಿಸುತ್ತಾರೆ. ಶುದ್ಧ ವಸ್ತುಗಳಿಗೆ ಸೂಕ್ತ ಬೆಲೆ ಬಂದ ನಂತರ ಮಾರಾಟ ಮಾಡುತ್ತಾನೆ. ನೇಕಾರರು ಸ್ವತಂತ್ರವಿದ್ದು ಉಳಿದ ನೇಕಾರರಿಗಿಂತ ಆರ್ಥಿಕವಾಗಿ ಸಬಲರಾಗಿರಬಹುದಾಗಿದೆ. ಇವರು ಸ್ವಂತ ಕೈಮಗ್ಗಗಳನ್ನು ಹೊಂದಿದ್ದು ಮತ್ತು ವಿದ್ಯುತ್ ಮಗ್ಗಗಳನ್ನು ಹೊಂದಿರುತ್ತಾರೆ. ಇವರು ಪಕ್ಕಾ ಅಥವಾ ಶುದ್ಧ ವಸ್ತುಗಳನ್ನು ಮತ್ತು ಸೀರೆಗಳನ್ನು ನೇಯ್ದು ಮೇಲೆ, ಅವುಗಳನ್ನು ದಲ್ಲಾಳಿ ಅಥವಾ ಮಾಲಿಕರಿಗೆ ಮಾರಾಟ ಮಾಡುತ್ತಾರೆ. ಬಂದ

ಹಣದಲ್ಲಿ ಸ್ವಲ್ಪ ಭಾಗವನ್ನು ಸ್ವಂತ ಖರ್ಚಿಗೆ ಬಳಸಿಕೊಳ್ಳುತ್ತಾರೆ. ಉಳಿದ ಹಣವನ್ನು ಮತ್ತೆ ಮರಳಿ ಸೀರೆಗೆ ಬೇಕಾದ ಕಚ್ಚಾ ನೂಲಿನ ವಸ್ತುವನ್ನು ಕೊಂಡುಕೊಳ್ಳಲು ವಿನಿಯೋಗಿಸಿಕೊಳ್ಳುತ್ತಾರೆ. ಇಲ್ಲಿ ನೇಕಾರರು ಸ್ವಲ್ಪ ಆರ್ಥಿಕವಾಗಿ ಸುಧಾರಿಸಿಕೊಳ್ಳಲು ನಿರಂತರ ಕೆಲಸ ಮತ್ತು ಬುದ್ಧಿತನದ ವ್ಯವಹಾರವನ್ನು ಮಾಡುತ್ತಾರೆ. ಶ್ರಮಪಡುವ ನೇಕಾರನು ಉತ್ತಮ ಉಳಿತಾಯ ಮಾಡಬಹುದು ಮತ್ತು ಉತ್ತಮ ಜೀವನವನ್ನು ನಡೆಸುತ್ತಾನೆ. ಇವರು ತಮ್ಮ ಉತ್ಪಾದನಾ ವಸ್ತುವನ್ನು ಬೆಲೆಯ ಏರಿಳಿತವನ್ನು ಪರೀಕ್ಷಿಸಿ ಮಾರಾಟ ಮಾಡಿದಾಗ ಉತ್ತಮ ಬದುಕು ಬದುಕಲು ಸಾಧ್ಯ (ವಕ್ತೃ 2)

**ಸಹಕಾರಿ ವಲಯ**

ನೇಕಾರರಿಂದ ನೇಕಾರರಿಗಾಗಿ ಸ್ಥಾಪಿಸಲ್ಪಟ್ಟ ಈ ಸಹಕಾರಿ ಸಂಘಗಳು, ನೇಕಾರರು ಉತ್ಪಾದಿಸಿದ ಉತ್ಪನ್ನಗಳು ಸದಾಕಾಲ ಒಳ್ಳೆ ಮಾರುಕಟ್ಟೆ ಪಡೆಯಲು ಪ್ರೋತ್ಸಾಹ ನೀಡುತ್ತವೆ. ಸಹಕಾರಿ ಸಂಘಗಳ ಮೂಲಭೂತ ಕರ್ತವ್ಯಗಳಾದ ನೂಲಿನ ಖರೀದಿ, ಸದಸ್ಯರುಗಳಿಗೆ ಸೂಲಿನ ಪೂರೈಕೆ, ನೇಯ್ದ ಸೀರೆಗಳ ಸಂಗ್ರಹ, ಕೂಲಿ ವಿತರಣೆ ಹಾಗೂ ಉತ್ಪನ್ನಗಳ ಮಾರಾಟ ಇವುಗಳನ್ನು ನಿರ್ವಹಣೆಮಾಡುವುದಾಗಿದೆ. ಜೊತೆಗೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ನೇಕಾರರಿಗೆ ತಲುಪಿಸುವ ಹೊಣೆಯನ್ನು ಸಹಕಾರಿ ಸಂಘಗಳು ನಿರ್ವಹಿಸುತ್ತವೆ.

ಬಾಗಲಕೋಟೆ ಜಿಲ್ಲೆಯ ಮೊದಲ ಸಹಕಾರಿ ಸಂಘ 1936ರಲ್ಲಿ ಕಮತಗಿಯ ಗ್ರಾಮದಲ್ಲಿ 'ದಿ ಬಿಜಾಪೂರ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೊ–ಆಪರೇಟಿವ್ವ ಅಸೋಸಿಯೆಷನ್ ಲಿ, ಕಮತಗಿ', ಎಂಬ ಹೆಸರಿನೊಂದಿಗೆ ಸ್ಥಾಪಿಸಲ್ಪಟ್ಟಿತ್ತು. ದಿನಾಂಕ 25.06.1942 ರಲ್ಲಿ 'ದಿ ಇಳಕಲ್ಲ ನೇಕಾರ ಸಹಕಾರಿ ಉತ್ಪಾದಕರ ಸಂಘ', ಆರಂಭವಾಯಿತು. ಸದ್ಯ ಇಳಕಲ್ಲ ನಗರದಲ್ಲಿ 18 ಸಹಕಾರಿ ಸಂಘಗಳು ಅಸ್ಥಿತ್ವದಲ್ಲಿವೆ. ಇವುಗಳಲ್ಲಿ ಸಹಕಾರಿ ಸಂಘಗಳು ಲಾಭಕರವಾಗಿವೆ ಎಂದು ತಿಳಿಯುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 143 ನೇಕಾರಿಕೆಯ ಸಹಕಾರಿ ಸಂಘಗಳು ಅಸ್ಥಿತ್ವದಲ್ಲಿದಲ್ಲಿರುವುದನ್ನು ಕಾಣುತ್ತವೆ. ಅದರಲ್ಲಿ ಉತ್ಪಾದನೆಯ ಸಹಕಾರಿ ಸಂಘಗಳು ಮಾತ್ರ ಲಾಭಗಳಿಸುತ್ತವೆ. ಜಿಲ್ಲೆಯ ಸೂಳಿಭಾವಿಯ 'ಶಾಖಾಂಬರಿ ನೇಕಾರಿ ಸಹಕಾರಿ ಸಂಘವು' ಜಿಲ್ಲೆಯಲ್ಲಿಯೇ ಉತ್ತಮ ಸಹಕಾರಿ ಸಂಘ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನೇಕಾರ ಸಂಘಗಳ ವ್ಯವಸ್ಥೆ ಕುರಿತು ಅಲ್ಲಿ ಮೇಲ್ವಿಚಾರಕರು ಹೀಗೆ ಹೇಳುತ್ತಾರೆ. ನೇಕಾರರ ಸಹಕಾರಿ ಸಂಘ ರಚಿಸಲು, ನೇಕಾರರೂ ಸಹಕಾರಿ ಸಂಘದಲ್ಲಿ ಸದಸ್ಯರಾಗಬೇಕು. ಸಂಘಗಳು ಸರಕಾರದ ನಿಯಮಗಳ ಪ್ರಕಾರ ಕೆಲವು ನಿಯಮಗಳು ಪಾಲಿಸಬೇಕಾಗುತ್ತದೆ. ಮೊದಲು ಸದಸ್ಯರಾಗುವವರ ಕನಿಷ್ಟ ವಯಸ್ಸು 18 ಕ್ಕಿಂತ ಮೇಲೆ ಇರಬೇಕು, ಸ್ಥಳೀಯ ನಿವಾಸಿಯಾಗಿರಬೇಕು, ಮೂಲ ಉದ್ಯೋಗ ನೇಕಾರಿಕೆ ಇರಬೇಕು, ಆದರೆ ಅವನು ಕಚ್ಚಾ ನೂಲಿನ ಅಥವಾ ಸೀರೆ ದಲ್ಲಾಳಿಯಾಗಿರಬಾರದು. ಬೇರೆ ಸಹಕಾರಿ ಸಂಘದ ಸದಸ್ಯನಾಗಿರಬಾರದು. ಸಹಕಾರ ಸಂಘದ ಸದಸ್ಯ ಹೊಂದಿದ ನೇಕಾರನು

ನೇಕಾರಿಕೆ ಮಾಡುವಂತಿದ್ದರೆ ಅವನಿಗೆ ನೂಲು ಒದಗಿಸುವುದು ಮತ್ತು ನೇಗೆಯ ಉಪಕರಣಗಳನ್ನು ಪಡೆಯಬಹುದಾಗಿದೆ. ಕಾಲಕ್ಕೆ ತಕ್ಕಂತೆ ಹೊಸ ನೇಯ್ಗೆ ನೇಯುವವರಿಗೆ ನೇಕಾರ ತರಬೇತಿಗಳನ್ನು ಒದಗಿಸುವದು. ಬಣ್ಣ ಮಾಡುವ ತರಬೇತಿ ನೀಡುವುದು, ನೇಕಾರರಿಗೆ ಸಂಬಂಧಿಸಿದ ಇತರೆ ವಿನ್ಯಾಸ, ಮಾರಾಟ ತರಬೇತಿ ಕೊಡುವುದು ಮುಖ್ಯವಾಗಿದೆ. ಕೆಲಸಕ್ಕೆ ತಕ್ಕುದಾದ ಕೂಲಿ ಮತ್ತು ಹಬ್ಬ ಹರಿದಿನಗಳಲ್ಲಿ ನೇಕಾರ ಸಹಕಾರಿ ಸಂಘಗಳು ಪ್ರೋತ್ಸಾಹ ಧನ ನೀಡುತ್ತಾರೆ. (ವಕ್ತೃ3)

**ಸರಕಾರಿ ವಲಯ**

ಕರ್ನಾಟಕ ಕೈಮಗ್ಗ ಕ್ಷೇತ್ರದಲ್ಲಿ ನೇಕಾರರ ಸರ್ವಾಂಗೀಣ ಬೆಳವಣಿಗೆಯ ಉದ್ದೇಶವನ್ನು ಇಟ್ಟುಕೊಂಡು 1975ರಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ (ಕೆಎಚ್‌ಡಿಸಿ) ಅಸ್ಥಿತ್ವಕ್ಕೆ ಬಂದಿತು. ಇದು ಕರ್ನಾಟಕ ರಾಜ್ಯದ ಒಂದು ಉದ್ಯಮವಾಗಿದೆ. ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದೆ. ರಾಜ್ಯಾದ್ಯಾಂತ ಇದು ಶಾಖೆಗಳನ್ನು ಹೊಂದಿದೆ. ಬಾಗಲಕೋಟೆ ಜಿಲ್ಲೆಯ ಇಳಕಲ್ಲ ಹಾಗೂ ರಬಕವಿ ಬನಹಟ್ಟಿ ನಗರಗಳಲ್ಲಿ ಹಾಗೂ ಕಮತಗಿಯಲ್ಲಿ ಕೆಎಚ್‌ಡಿಸಿ ಶಾಖೆಗಳಿವೆ. ಇಳಕಲ್ಲ ನಗರದಲ್ಲಿ ಮೇ 1976ರಲ್ಲಿ ಈ ಶಾಖೆಯು ಕೆಲಸ ಆರಂಭಿಸಿದೆ. ಪಾರಂಪರಿಕ ಇಳಕಲ್ಲ ಸೀರೆ ತಯಾರಿಕೆಯನ್ನು ಉತ್ತೇಜಿಸುವುದರ ಜೊತೆಗೆ ಹೊಸ ವಿನ್ಯಾಸದ ಬಟ್ಟೆಗಳ ಉತ್ಪನ್ನಗಳನ್ನು ಪ್ರೋತ್ಸಾಹಿಸಿ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವತ್ತ ಕಾರ್ಯಕ್ರಮಗಳನ್ನು ಕೆಎಚ್‌ಡಿಸಿ ಹಾಕಿಕೊಳ್ಳುತ್ತಾ ಬಂದಿದೆ. ಸರಕಾರ ಹಾಕಿಕೊಳ್ಳುವ ನೇಕಾರರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನೇಕಾರರ ಬಾಗಿಲಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. 1984–89ರಲ್ಲಿ ನೇಕಾರರಿಗಾಗಿ ಇಳಕಲ್ಲ ನಗರದಲ್ಲಿ 154 ಕೆಲಸದ ಮನೆಗಳನ್ನು ನಿರ್ಮಿಸಿ ವಿತರಣೆ ಮಾಡಲಾಗಿದೆ. ಸ್ವಂತ ಮಗ್ಗವಿಲ್ಲದ ಕಾರ್ಮಿಕರಿಗೆ ನೇಯಲು ಅನುಕೂಲವಾಗುವಂತೆ ಸಾಮೂಹಿಕ ನೇಯ್ಗೆ ಕಾರ್ಯಕ್ರಮಗಳನ್ನು ಕೆಎಚ್‌ಡಿಸಿ ಹೊಂದಿದೆ. ಈ ವೃತ್ತಿಯನ್ನು ಕಲಿಯಲು ಆಸಕ್ತಿ ಉಳ್ಳವರಿಗೆ ತರಬೇತಿಯನ್ನು ಕೊಡುವುದರ ಜೊತೆಗೆ ಕೈಮಗ್ಗ ಉದ್ಯಮಕ್ಕೆ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ. ಕೆಎಚ್‌ಡಿಸಿಯಲ್ಲಿ ಸದಸ್ಯನಾಗುವ ಪ್ರತಿಯೊಬ್ಬನಿಗೆ ಪಾಸ್‌ಬುಕ್ ವಿತರಿಸಲಾಗುತ್ತದೆ. ಸೀರೆ ಅಥವಾ ಬಟ್ಟೆ ತಯಾರಿಸಲು ಬೇಕಾದ ಕಚ್ಚಾ ವಸ್ತು ಹಾಗೂ ನೂಲು ಅವನಿಗೆ ಪೂರೈಸಿ ಬೇಕಾದ ವಿನ್ಯಾಸ ಸೀರೆ ಅಥವಾ ಬಟ್ಟೆಯನ್ನು ನೇಯ್ದುಕೊಂಡು ಬರಲು ನೇಕಾರರಿಗೆ ಹೇಳಲಾಗುತ್ತದೆ. ನೇಯ್ದ ಬಟ್ಟೆಯನ್ನು ಅವನು ಮರಳಿ ಕೇಂದ್ರಕ್ಕೆ ತಂದು ಕೊಟ್ಟಾಗ ಅವನಿಗೆ ಅದರ ಕೂಲಿಯನ್ನು ನೀಡುತ್ತಾರೆ. ನೇಯ್ಗೆ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ಕಚ್ಚಾ ಮಾಲನ್ನು ಪೂರೈಸಲಾಗುತ್ತದೆ. ಪೂರೈಸಿದ ಕಚ್ಚಾ ನೂಲಿನ ವಿವರ, ತಯಾರಿಸಿದ ಸೀರೆಯ ವಿವರ, ಕೊಡಬೇಕಾದ ಹಾಗೂ ಪಡೆದ ಕೂಲಿಯ ಎಲ್ಲಾ ವಿವರಗಳನ್ನು ಪಾಸ್‌ಬುಕ್‌ನಲ್ಲಿ ನಮೂದಿಸಲಾಗುತ್ತದೆ. ಹೊಸ ವಿನ್ಯಾಸವುಳ್ಳ ಬಟ್ಟೆಯನ್ನು ನೇಯಲು ಬೇಕಾದ ಸಲಕರಣೆಗಳ

ಖರೀದಿಗೆ ಬ್ಯಾಂಕಿನಿಂದ ಸಾಲವನ್ನು ಪಡೆಯಲು ಕೂಡಾ ಕೆಎಚ್‌ಡಿಸಿ ಸಹಕರಿಸುತ್ತದೆ. ವರ್ಷದ 12 ತಿಂಗಳು ನೇಕಾರರಿಗೆ ಕೆಲಸ ನೀಡುತ್ತಾ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸುತ್ತದೆ. ಆದರೂ ಇದು ಸಮರ್ಪಕವಾಗಿ ಸಾಗುತ್ತಿಲ್ಲ. ನೇಕಾರರ ಉತ್ಪಾದನಾ ವಸ್ತುಗಳ ತಯಾರಿಸಲು ಕಚ್ಚಾ ವಸ್ತುಗಳನ್ನು ಖರೀದಿಸದೆ ಇರುವುದು, ಕೂಲಿಯನ್ನು ಸಮಯಕ್ಕೆ ಸರಿಯಾಗಿ ನೀಡದೆ ಇರುವುದು, ಮಗ್ಗಗಳ ತಾಂತ್ರಿಕ ಸಮಸ್ಯೆ ಕಂಡುಬಂದರೆ ಆ ಸಮಸ್ಯೆಯನ್ನು ನಿಧಾನಗತಿಯಲ್ಲಿ ಸರಿಪಡಿಸುವುದು. ಈ ಕಾಲಕ್ಕೆ ತಕ್ಕಹಾಗೆ ವಿನ್ಯಾಸಗಳ ಬದಲಾವಣೆ ಇಲ್ಲದಿರುವುದು ಮುಖ್ಯ ಸಮಸ್ಯೆಗಳಾಗಿ ಕಂಡಿರುವುದು ಇಲ್ಲಿನ ನೇಕಾರರಿಂದ ತಿಳಿಯಲಾಗಿದೆ.

**ಕೋಷ್ಟಕ 1: ಉದ್ಯಮ ನೇಕಾರಿಕೆಯಲ್ಲಿ ತೊಡಗಿರುವ ನೇಕಾರರ ವಿವರ**

| ಉದ್ಯಮ ನೇಕಾರರು | ಪ್ರತಿಕ್ರಿಯಿಸಿದವರು | % |
|---|---|---|
| ಮಾಲಿಕತ್ವದ ನೇಕಾರರು | 7 | 7 |
| ಮುಂಗಡ ನೇಕಾರರು | 10 | 10 |
| ಸಟ್ಟಾ ನೇಕಾರರು | 0 | 00 |
| ರೊಕಡಾ ನೇಕಾರರು | 13 | 13 |
| ಕೂಲಿ ನೇಕಾರರು | 17 | 17 |
| ಸಹಕಾರಿ ಸಂಘದ ನೇಕಾರರು | 50 | 50 |
| ಸರಕಾರಿ ವಲಯದ ನೇಕಾರರು | 3 | 3 |
| ಒಟ್ಟು | 100 | 100 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ ಒಂದರಲ್ಲಿ ಬಾಗಲಕೋಟೆ ಜಿಲ್ಲೆ ಬಾದಾಮಿ ಮತ್ತು ಹುನಗುಂದ ತಾಲೂಕುಗಳ ಗುಳೇದಗುಡ್ಡ, ಕಮತಗಿ, ಅಮೀನಗಡ ಹಾಗೂ ಸೂಳಿಭಾವಿ ನೇಕಾರರ ಉದ್ಯಮ ವ್ಯವಸ್ಥೆಯನ್ನು ತಿಳಿಸುತ್ತದೆ. ಶೇ 50 ರಷ್ಟು ಕುಟುಂಬಗಳು ಸಹಕಾರಿ ಸಂಘದ ಉದ್ಯಮ ವಲಯದಲ್ಲಿ ನೇಕಾರಿಕೆ ಕೈಗೊಂಡಿದ್ದಾರೆ. ಆದರೂ ಸಹಕಾರಿ ಸಂಘಗಳಲ್ಲಿ ನೇಕಾರರನ್ನು ಸದಸ್ಯತ್ವವನ್ನು ಪಡೆದಿದ್ದರು ಇಲ್ಲಿನ ನೇಕಾರರು ಖಾಸಗಿ ಅಥವಾ ಮಾಸ್ಟರ್‌ವ್ವಿವರ್ ಹತ್ತಿರ ಕೂಲಿ ನೇಕಾರಿಕೆ ಮಾಡುತ್ತಾರೆ. ಇಲ್ಲಿನ ಯೋಜನೆಗಳು ಸಹಕಾರಿ ಸಂಘದ ಮುಖ್ಯ ಸದಸ್ಯರ ನೇಕಾರರಿಗೆ ತಲುಪಿರುವುದು ಕಂಡುಬಂದಿದೆ. ಇದರಿಂದ ನಿಷ್ಟಾಂವಂತ ನೇಕಾರನು ಸರಕಾರಿ ಯೋಜನೆಗಳಿಂದ ವಂಚಿತನಾಗುತ್ತಿದ್ದಾನೆ ಎಂದು ಇದರ ಮೂಲಕ ಹೇಳಬಹುದು.

**ಕೋಷ್ಟಕ 2: ನೇಕಾರರು ದಿನಕ್ಕೆ ದುಡಿಯುವ ಒಟ್ಟು ಸಮಯ ಮತ್ತು ದಿನದ ಆದಾಯ/ಕೂಲಿ**

| ಸಮಯ (ಗಂಟೆಗಳಲ್ಲಿ) | ಪ್ರತಿಕ್ರಿಯಿಸಿದವರು | % | ದಿನಗೂಲಿ ರೂ. | ಪ್ರತಿಕ್ರಿಯಿಸಿದವರು | % |
|---|---|---|---|---|---|
| 5 ರಿಂದ 7 | 17 | 17 | 100–200 | 68 | 68 |
| 8 ರಿಂದ 10 | 76 | 76 | 201–400 | 20 | 20 |
| 10 ಕ್ಕೂ ಹೆಚ್ಚು | 07 | 07 | 401–600 | 12 | 12 |
| **ಒಟ್ಟು** | **100** | **100** | **ಒಟ್ಟು** | **100** | **100** |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ ಎರಡರಲ್ಲಿ ನೇಕಾರರು ದುಡಿಯುವ ಒಟ್ಟು ಸಮಯ ಮತ್ತು ದಿನದ ಕೂಲಿ/ಆದಾಯವನ್ನು ತಿಳಿಸುತ್ತದೆ. ಒಟ್ಟು ಕುಟುಂಬಗಳಲ್ಲಿ ಶೇ.76 ರಷ್ಟು ಕುಟುಂಬಗಳು ದಿನಕ್ಕೆ ಎಂಟರಿಂದ ಹತ್ತು ಗಂಟೆಗಳ ಸಮಯ ದುಡಿಯುತ್ತಾರೆ. ನೇಕಾರನು ಕನಿಷ್ಟ 8 ಗಂಟೆ ಮತ್ತು ಗರಿಷ್ಟ 10 ಗಂಟೆಗೂ ಹೆಚ್ಚು ಕಾಲ ನೇಕಾರಿಕೆಯಲ್ಲಿ ನಿರತರಾಗಿದ್ದಾರೆ. ಇದರಿಂದ ನೇಕಾರರು ದೀರ್ಘ ಕಾಯಿಲೆಗಳಾದ ಕಣ್ಣಿನ ದೋಷ, ಮೊಣಕಾಲು ನೂವು, ಕಫ ಮತ್ತು ಇತರೆ ಸಾಮಾನ್ಯ ಆರೋಗ್ಯ ಸಮಸ್ಯಗಳಿಂದ ಬಳಲುತ್ತಾರೆ ಮತ್ತು ದುಶ್ಚಟಗಳಾದ ಧೂಮಪಾನ, ತಂಬಾಕು ಮತ್ತು ಮದ್ಯಸೇವನೆ ಹೆಚ್ಚಾಗಿ ಕಂಡುಬಂದಿದೆ. ಆದಾಯವನ್ನು ನೋಡಿದಾಗ ಶೇ 68ರಷ್ಟು ಕುಟುಂಬಗಳ ದಿನದ ಕೂಲಿ 100–200 ರೂಪಾಯಿಗಳು ಮಾತ್ರ. ದಿನದ ಆದಾಯ ಕಡಿಮೆ ಇರುವುದರಿಂದ ದಿನದ ಜೀವನ ಕಷ್ಟದಿಂದ ಕೂಡಿದೆ.

**ಕೋಷ್ಟಕ 3: ನೇಕಾರರ ಕುಟುಂಬಗಳು ಹೊಂದಿರುವ ಸಾಲಗಳು**

| ಸಾಲಗಳ ವಿಧ | ಪ್ರತಿಕ್ರಿಯಿಸಿದವರು N=100 | | ಒಟ್ಟು |
|---|---|---|---|
| | ಇದೆ | ಇಲ್ಲ | |
| ಬ್ಯಾಂಕು ಸಾಲ (ಸಹಕಾರಿ) | 50 | 50 | 100 |
| ಸಹಕಾರಿ ಸಂಘ | 88 | 12 | 100 |
| ಬಡ್ಡಿ ಸಾಲ | 34 | 66 | 100 |
| ಪಿತ್ರಾರ್ಜಿತ ಸಾಲ | 06 | 94 | 100 |
| ಕೈಗಡ ಸಾಲ | 93 | 07 | 100 |
| ಅಡವಿಟ್ಟ ಸಾಲ | 18 | 82 | 100 |

**ಮೂಲ: ಕ್ಷೇತ್ರಕಾರ್ಯ**

ನೇಕಾರನು ಹಬ್ಬ, ಮದುವೆ ಹಾಗೂ ಇತರೆ ಧಾರ್ಮಿಕ ಆಚರಣೆಗಳನ್ನು ನಿರ್ವಹಣೆಮಾಡಲು ಸಾಲ ತೆಗೆದುಕೊಂಡು ಸಾಲದ ಚಕ್ರದಲ್ಲಿ ಸಿಲುಕುತ್ತಾನೆ. ಇದರಿಂದ ಮಾಲೀಕರಿಂದ ಮಹಿಳೆಯರು ಇತರೆ ಸಂಕಷ್ಟಗಳಿಗೆ ಒಳಗಾಗುತ್ತಿರುವುದು ತಿಳಿದುಬಂದಿದೆ. ಕೋಷ್ಟಕ ಮೂರರಲ್ಲಿ ನೇಕಾರರು ತೆಗೆದುಕೊಂಡ ಸಾಲಗಳ ವಿವರಣೆಯನ್ನು ತಿಳಿಸಲಾಗಿದೆ. ನೇಕಾರರು ನೇರವಾಗಿ ಬ್ಯಾಂಕ್ ಸಾಲವನ್ನು ಪಡೆಯುವುದು ಕಡಿಮೆ. ನೇಕಾರರು ಹೆಚ್ಚಾಗಿ ಸಾಲವನ್ನು ಮಾಲೀಕವರ್ಗ/ಮಾಸ್ಟರ್ ವ್ಹಿವರ್ ಕಡೆ ತೆಗೆದುಕೊಳ್ಳುತ್ತಾರೆ. ಸಮೀಕ್ಷೆಯಲ್ಲಿ ನೇಕಾರರು ಎಲ್ಲ ರೀತಿಯ ಸಾಲಬಾದೆಯಿಂದ ಬಳತ್ತಿರುವದು ಸ್ಪಷ್ಟವಾಗಿ ಕಾಣುತ್ತದೆ. ನೇಕಾರರು ಇಲ್ಲಿ ಸಹಕಾರಿ ಸಂಘಗಳಲ್ಲಿ ಶೇ 88 ಮತ್ತು ಮಾಲೀಕರು ನೀಡುವ ಕೈಗಡಸಾಲವು ಶೇ. 93 ರಷ್ಟು ಕುಟುಂಬಗಳು ತೆಗೆದುಕೊಂಡಿರುವುದನ್ನು ಗಮನಿಸಿದರೆ ನೇಕಾರರು ಸಾಲಬಾದೆಯಿಲ್ಲಿ ಸಿಲುಕಿರುವುದು ಸ್ಪಷ್ಟವಾಗುತ್ತದೆ. ಸಾಲವನ್ನು ಮಾಡಲು ಪ್ರಮುಖ ಕಾರಣ ನೋಡಿದಾಗ ದಿನದ ಕೂಲಿ ಕಡಿಮೆ, ಕುಟುಂಬ ನಿರ್ವಹಣೆ ವೆಚ್ಚ ಹೆಚ್ಚಾಗಿರವುದು, ಮಗ್ಗಗಳ ಖರೀದಿ ಮತ್ತು ಮಗ್ಗಗಳ ತಾಂತ್ರಿಕ ದೋಷ ನಿವಾರಣೆಗೆ, ಕಚ್ಚಾ ವಸ್ತು ಖರೀದಿ ಮಾಡುವುದು ಹಾಗೂ ಧಾರ್ಮಿಕ ಆಚರಣೆಗಳು, ಮದುವೆ, ಮನೆನಿರ್ಮಾಣ ಪ್ರಮುಖ ಕಾರಣಗಳು ತಿಳಿದುಬಂದವು. ಆದ್ದರಿಂದ ನೇಕಾರಿಕೆ ವೃತ್ತಿಯನ್ನು ಮಾಡುವ ಶೇ 98ರಷ್ಟು ಜನರು ಸಾಲ ಮಾಡಿರುವದು ಕಂಡುಬಂದಿದೆ. ಇದರಿಂದ ಅವರು ಬಡತನದಲ್ಲಿ ನಿರಂತರ ಜೀವನವನ್ನು ನಡೆಸುತ್ತಿದ್ದಾರೆ.

**ನೇಕಾರ ಉತ್ಪನ್ನಗಳ ಮಾರಾಟ ವ್ಯವಸ್ಥೆ**

ಜಿಲ್ಲೆಯಲ್ಲಿ ಹೆಚ್ಚಾಗಿ ಉತ್ಪಾದನೆ ಆಗುತ್ತಿರುವುದು ಸಾಂಪ್ರದಾಯಿಕ ಉತ್ಪನ್ನ ಇಳಕಲ್ಲ ಸೀರೆ, ಗುಳೇದಗುಡ್ಡದ ಖಣಗಳು. ಸಾಂಪ್ರದಾಯಿಕ ಉತ್ಪನ್ನಗಳ ಕೊಡು–ಕೊಳ್ಳುವುವಿಕೆ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ನೇರ ಮಾರಾಟ, ಮಾಲೀಕರಿಗೆ ಮಾರಾಟ ಮತ್ತು ಹೊರ ರಾಜ್ಯದ ಬಂಡವಾಳಿಗರಿಗೆ ಮಾರಾಟ ಮಾಡುವುದು. ಹೊರ ರಾಜ್ಯದ ಬಂಡವಾಳಿಗಳಿಂದ ಉತ್ಪನ್ನಗಳನ್ನು ತಯಾರಿಸಲು ಮುಂಗಡ ಹಣನೀಡುವ ವ್ಯವಸ್ಥೆ ಕಂಡುಬಂದಿದೆ. ಈ ಪ್ರದೇಶದಲ್ಲಿ ವ್ಯಾಪಾರಕ್ಕಾಗಿ ಬಹಳ ಹಿಂದಿನಿಂದ ವಲಸೆ ಬಂದಿರುವ ಮಾರವಾಡಿ ಸಮುದಾಯದವರು ಮುಖ್ಯ ವ್ಯಾಪಾರಿಗಳಾಗಿ ಮತ್ತು ಮಾಲೀಕ ವರ್ಗವಾಗಿ ನೆಲೆನಿಂತಿದ್ದಾರೆ. ಈ ಜನರು ಮರಾಠಿ, ಗುಜರಾತಿ ಮತ್ತು ಹಿಂದಿ ಭಾಷೆ ಬರುವುದರಿಂದ ಇವರು ಮುಖ್ಯ ವ್ಯಾಪಾರದ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅದ್ದರಿಂದ ಇಲ್ಲಿಯ ಜನರು ನೇಕಾರಿಕೆಯ ಕಚ್ಚಾವಸ್ತುಗಳನ್ನು ಮತ್ತು ನೇಕಾರಿಕೆ ಮಾಡಿ ಶುದ್ಧ ಉಡುಪನ್ನು ಮಧ್ಯವರ್ತಿ ವ್ಯಾಪಾರಿಗಳಿಂದ ಮಾರಾಟದ ವ್ಯವಸ್ಥೆ ಇನ್ನೂ ಪ್ರಚಲಿತದಲ್ಲಿದೆ. ನೇಕಾರ ಸಮುದಾಯದ ಕೆಲವರು ಈ ಮಧ್ಯವರ್ತಿ ಕೆಲಸವನ್ನು ಮಾಡುತ್ತಿದ್ದು ನೇಕಾರರ ಅಭಿವೃದ್ದಿಗೆ ಸ್ವಲ್ಪ ಮಟ್ಟಿಗೆ ಸುಧಾರಣೆ ತರುತ್ತಿದ್ದಾರೆ. ಇಲ್ಲಿಯ ಉತ್ಪಾದನಾ ಕಚ್ಚಾವಸ್ತುಗಳನ್ನು ಬೆಂಗಳೂರು,

ರಾಮನಗರ, ದೊಡ್ಡಬಳ್ಳಾಪುರ ಮತ್ತು ಹೆಚ್ಚು–ಕಡಿಮೆಯ ಸಂದರ್ಭದಲ್ಲಿ ಹೊರರಾಜ್ಯಗಳಿಂದ ಖರೀದಿಮಾಡುತ್ತಾರೆ. ಇಲ್ಲಿಯ ಉತ್ಪನ್ನಗಳನ್ನು ಮಹಾರಾಷ್ಟ್ರ ಹೆಚ್ಚು ಆಮದು ಮಾಡಿಕೊಳ್ಳುವ ರಾಜ್ಯವಾಗಿದೆ. ಕಡಿಮೆ ಪ್ರಮಾಣದಲ್ಲಿ ಗುಜರಾತಿ ಜನರು ಆಮದು ಮಾಡಿಕೊಳ್ಳುತ್ತಾರೆ ಎಂದು ತಿಳಿಯುತ್ತದೆ. ಆದರು ಶೇ 50ಕ್ಕೂ ಹೆಚ್ಚು ಉತ್ಪಾದನೆ ವಸ್ತುಗಳು ಉತ್ತರ ಕರ್ನಾಟಕದ ಗ್ರಾಮೀಣ ಜನರು ಉಪಯೋಗಿಸುವುದು ತಿಳಿಯುತ್ತದೆ. ಆದ್ದರಿಂದ ಇದರ ಉತ್ಪನ್ನದ ಪ್ರಮಾಣವು ಹೆಚ್ಚಾಗಿದ್ದು ಇದರ ಮಾರಾಟದ ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಆದರೆ ಆಧುನಿಕ ಸಂದರ್ಭದಲ್ಲಿ ಕಾಲಕ್ಕೆ ತಕ್ಕಂತೆ ಹಲವಾರು ಬದಲಾವಣೆಗಳು ಒಳಗೊಂಡಿರವುದರಿಂದ ಇನ್ನೂ ಈ ಪ್ರದೇಶದಲ್ಲಿ ನೇಕಾರಿಕೆಯು ಉಳಿದುಕೊಂಡಿದೆ. ಅದಲ್ಲದೆ ಇಲ್ಲಿಯ ಸಾಂಪ್ರದಾಯಿಕ ಜನರು ಸಾಂಪ್ರದಾಯಿಕ ಉಡುಪು ಧರಿಸಿದರೆ, ನವಜನರು ಹೊಸ ವಿನ್ಯಾಸಗಳ, ಉನ್ನತ ಉಡುಪುಗಳ ತಯಾರಿಕೆಯು ಜನರನ್ನು ಆಕರ್ಷಿಸುತ್ತಿವೆ. ಆದರೇ ನೇಕಾರಿಕೆ ಮಾಡುವ ನೇಕಾರನ ಕೂಲಿಯು ಅಥವಾ ಆದಾಯ ಅವನ ಶ್ರಮಕ್ಕೆ ತಕ್ಕ ಇರುವುದಿಲ್ಲ. ಕಾರ್ಮಿಕ ಇಲಾಖೆ ಘೋಷಿಸಿರುವ ಸಾಮಾನ್ಯ ವೇತನವು ಈ ನೇಕಾರರರಿಗೆ ಸಿಗದೇ ಇರುವುದು ಅಧ್ಯಯನದಿಂದ ತಿಳಿದು ಬಂದಿದೆ.

**ಉಪಸಂಹಾರ**

ನೇಕಾರರು ವೃತ್ತಿ ಜೀವನವು ಬಹಳ ಸಂಕಷ್ಟದಿಂದ ಕೂಡಿದೆ. ನೇಕಾರರು ಶ್ರಮ ಜೀವಿಗಳು ದಿನದ ಕನಿಷ್ಟ 12 ಗಂಟೆಗಳಕಾಲ ದುಡಿಯುವ ವರ್ಗದ ಜನರು. ಸಣ್ಣ ಯಂತ್ರಗಳ ಬಳಕೆ ನೇಕಾರರು ಇದ್ದರು ಇವರಿಗೆ ಕಾರ್ಮಿಕ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಬೃಹತ್ ಯಾಂತ್ರೀಕರಣ ಬಟ್ಟೆ ಉತ್ಪಾದನೆಗಳಿಗೆ ಬಳಸುವುದದರಿಂದ, ಸಣ್ಣ ಕೈಗಾರಿಕೆ, ಗುಡಿಕೈಗಾರಿಕೆ, ಚರಕಗಳನ್ನು ಉಪಯೋಗಿಸಿಕೊಂಡು ವೈಯಕ್ತಿಕ ನೇಕಾರಿಕೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಇದರಿಂದ ನಿರುದ್ಯೋಗ ಪ್ರಮಾಣ ಹೆಚ್ಚಳ ಹಾಗೂ ಇತರೆ ಉದ್ಯೋಗವನ್ನು ಅರಸಿ ವಲಸೆ ಪ್ರಮಾಣ ಸಾಂಪ್ರದಾಯಿಕ ನೇಕಾರರ ನಗರಗಳಲ್ಲಿ ನಿರಂತರ ನಡೆಯುತ್ತಿರುವ ಸಮಸ್ಯೆಯಾಗಿದೆ. ಇದಕ್ಕೆ ಮುಖ್ಯ ಕುರುಹು ಗುಳೇದಗುಡ್ಡ ನಗರ ಸಾಕ್ಷಿಯಾಗಿದೆ. ನೇಕಾರರಿಗೆ ನೇಕಾರಿಕೆ ಉದ್ಯೋಗದಲ್ಲಿ ಭದ್ರತೆ ಇಲ್ಲದಿರುವುದು. ನೇಕಾರರು ಹೆಚ್ಚಾಗಿ ಮಾಲೀಕ ವರ್ಗದ ಜನರ ಅಡಿಯಲ್ಲಿ ನೇಕಾರಿಕೆ ಮಾಡುತ್ತಿರುವುದರಿಂದ, ಇಲ್ಲಿ ಸಹಕಾರ, ಸರಕಾರಿ ಯೋಜನೆಗಳು ನೇಕಾರರಿಂದ ದೂರ ಇರುತ್ತವೆ. ಈ ಯೋಜನೆಗಳು ನೇಕಾರರ ಮಾಲೀಕವರ್ಗ ಮತ್ತು ಮಧ್ಯವರ್ತಿಗಳು ನೇಕಾರರ ಹೆಸರು ಹೇಳಿಕೊಂಡು ಯೋಜನೆಯ ಸದುಪಯೋಗ ಪಡೆಯುತ್ತಿದ್ದಾರೆ. ನೇಕಾರರ ಕಲ್ಯಾಣಕ್ಕಾಗಿ ನೇಕಾರರಿಗೆ ನೇರ ಯೋಜನೆಯ ಸದುಪಯೋಗವಾಗುವಂತೆ ಕೆಲಸ ನಡೆಯಬೇಕು. ನೇಕಾರರಿಗೂ ಕಾರ್ಮಿಕ ಕಲ್ಯಾಣ ಇಲಾಖೆಯ ಸೌಲಭ್ಯಗಳು ದೊರೆಯಬೇಕು. ಕೈಮಗ್ಗ ನೇಕಾರರ ದಿನದ ಆದಾಯ ಹೆಚ್ಚಳ ಮಾಡಬೇಕು. ಕನಿಷ್ಟ ವಿದ್ಯುತ್‌ಚಾಲೀತ ಮಗ್ಗದ ನೇಕಾರರಿಗೂ ನಿರಂತರ

ಉದ್ಯೋಗ ದೊರಕುವ ಹಾಗೆ ಯೋಜನೆಗಳನ್ನು ಹಾಕಿಕೊಂಡು ನೇಕಾರರ ಅಭಿವೃದ್ಧಿಗೆ ಸಹಕಾರವನ್ನು ಸರಕಾರಗಳು ಮಾಡಬೇಕಾಗಿದೆ.

**ವಕ್ತೃಗಳ ವಿವರ**

1. ಪ್ರಕಾಶ ತಿಪ್ಪಣ್ಣ ಗಾಯದ, (ವಯಸ್ಸು–58) ಹಿರಿಯ ನೇಕಾರರು, ಗುಳೇದಗುಡ್ಡ, ಬಾದಾಮಿ ತಾಲೂಕು.
2. ನಾಗಪ್ಪ ಚನ್ನಪ್ಪ ಗಡೇದಗೌಡ್ರ, (ವಯಸ್ಸು–56) ಹಿರಿಯ ನೇಕಾರರು, ಕಮತಗಿ, ಹುನಗುಂದ ತಾಲೂಕು. ಮಲ್ಲಿಕಾರ್ಜುನ ಸಂ. ಹೊಟಿ, (ವಯಸ್ಸು–55) ಸಹಕಾರಿ ಸಂಘದ ಸದಸ್ಯರು, ಕಮತಗಿ, ಹುನಗುಂದ ತಾಲೂಕು.
3. ದೇವೇಂದ್ರಪ್ಪ ಮೊರಬದ, (ವಯಸ್ಸು–46), ನೇಕಾರರು, ಗುಳೇದಗುಡ್ಡ, ಬಾದಾಮಿ ತಾಲೂಕು.

**ಪರಾಮರ್ಶನ ಗ್ರಂಥಗಳು**


- ಇರ್ಫಾನ್ ಹಬೀಬ್. (ಮೂಲ). (2015). ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ. (ಅನು: ಕಕ್ಕಿಲಾಯ ಬಿ.ವಿ.), ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಈರಣ್ಣ ಹಟ್ಟಿ. (1982). ಕೈಮಗ್ಗ ಉದ್ದಿಮೆ ಒಂದು ಸಮಸ್ಯೆಯೇ?. ಕರ್ನಾಟಕ ವಿ.ವಿ. ಧಾರವಾಡ.
- ಈರಣ್ಣ ಹಟ್ಟಿ. (1982). ನೇಕಾರಿಕೆ ಮತ್ತು ಸರಕಾರ. ಉಪನ್ಯಾಸ ಗ್ರಂಥಮಾಲೆ, ಕರ್ನಾಟಕ ವಿ.ವಿ. ಧಾರವಾಡ.
- ಜವಳಿ: ಹೊಸಕಥಾನಕದ ಹೆಣಿಕೆ. (ಅಕ್ಟೋಬರ್, 2016). ಯೋಜನಾ ಮಾಸಿಕ, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಬೆಂಗಳೂರು.
- ಮಹದೇವ ಜಗತಾಪ. (2004). ಕರ್ನಾಟಕ ಜನಪದ ಕಲೆಗಳು ಮತ್ತು ಚಿತ್ತಾರಗಳು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಮಹದೇವ ಸಿ. (ಸಂ). (2009). ನೇಕಾರ ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಸ್ಥಿತಿಗತಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಪ್ರಜ್ಞಾ ಕೆ. ವಿ. (2017). ನೇಕಾರ ಸಮುದಾಯ: ಸಾಮಾಜಿಕ ಆರ್ಥಿಕ ಬದುಕು, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.


IIMRD JOURNALS